

## ಪ್ರಶಸ್ತಿ ತಂದ ಬಲ

ಒಂದು ಕಾಲದಲ್ಲಿ ಬಿಷನ್ ಸಿಂಗ್ ಬೇಡಿ, ಬಿ.ಎಸ್.ಚಂದ್ರಶೇಖರ್, ಆರ್.ಪ್ರಸನ್ನ ಮುಂತಾಗಿ ಜಗತ್ತನ್ನೇ ನಡುಗಿಸುವ ಭಾರತೀಯ ಸ್ಪಿನ್ನರ್‌ಗಳಿದ್ದರು. ಕಪಿಲ್‌ದೇವ್ ಬಂದ ಬಳಿಕ ವೇಗದ ಬೌಲಿಂಗ್ ಕಡೆಗೆ ನಮ್ಮವರ ಗಮನ ಹೆಚ್ಚಾಯಿತು. ಆದರೆ ಭಾರತೀಯರಿಗೆ ವೇಗಕ್ಕಿಂತ ಹೆಚ್ಚಾಗಿ ಸ್ಪಿನ್ ಬೌಲಿಂಗೇ ಒಲಿಯುವುದು ಎನ್ನುವುದು ಕಾಲಕಾಲಕ್ಕೆ ಸಾಬೀತಾಗಿದೆ. ನಮ್ಮ ವೇಗಿಗಳ ಬಾಳಿಕೆ ಅವಧಿಯೂ ಕಡಿಮೆಯೇ. ಸದ್ಯ ಭಾರತ ತಂಡದಲ್ಲಿರುವ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್‌ರ ಸಾಧನೆಯನ್ನು ಗಮನಿಸಿದಾಗ ಮೇಲಿನ ಮಾತುಗಳ ಮಹತ್ವ ಅರಿವಾಗುತ್ತದೆ. 2012–13ನೇ ಸಾಲಿನಲ್ಲಿ ‘ಭಾರತದ ಅತ್ಯುತ್ತಮ ಅಂತರರಾಷ್ಟ್ರೀಯ ಕ್ರಿಕೆಟಿಗ’ ಎಂಬ ‘ಪಾಲಿ ಉಮ್ರಿಗಾರ್ ಪ್ರಶಸ್ತಿ’ಯನ್ನು ಗೆದ್ದುಕೊಂಡ ಅಶ್ವಿನ್ ಬಿಸಿಸಿಐ ನೀಡುವ ಐದು ಲಕ್ಷ ರೂಪಾಯಿ ಬಹುಮಾನವನ್ನು ಜೇಬಿಗಿಳಿಸಿಕೊಂಡಿದ್ದಾರೆ. 2006ರಿಂದ ಈ ಪ್ರಶಸ್ತಿಯನ್ನು ಸತತವಾಗಿ ಗೆದ್ದವರು ಭಾರತ ತಂಡದ ಬ್ಯಾಟ್ಸ್‌ಮನ್‌ಗಳೇ. 2006ರಿಂದ 2010ರವರೆಗೆ ಸತತವಾಗಿ ಸಚಿನ್ ಈ ಪ್ರಶಸ್ತಿ ಗೆದ್ದಿದ್ದರೆ, ಆ ಬಳಿಕ ಸೆಹ್ವಾಗ್, ಗೌತಮ್ ಗಂಭೀರ್, ರಾಹುಲ್ ಡ್ರಾವಿಡ್ ಮತ್ತು ವಿರಾಟ್ ಕೊಹ್ಲಿ ಈ ಪ್ರಶಸ್ತಿ ಗಳಿಸಿದ್ದರು. ಆದರೆ ಇದೇ ಮೊದಲ ಬಾರಿ ಬೌಲರ್ ಗೆದ್ದಿರುವುದು ವಿಶೇಷ.

ಪ್ರಶಸ್ತಿ ಗೆದ್ದ ಮಾತ್ರಕ್ಕೆ ಅಶ್ವಿನ್ ತಂಡದಲ್ಲಿ ಗಟ್ಟಿಯಾಗಿದ್ದಾರೆ ಎನ್ನುವ ಹಾಗಿಲ್ಲ. ಮುಖ್ಯವಾಗಿ ವಿದೇಶ ಪ್ರವಾಸಗಳಲ್ಲಿ ಅಶ್ವಿನ್ ಬೌಲಿಂಗ್ ಪರಿಣಾಮಕಾರಿಯಾಗಿಲ್ಲ ಎಂಬ ದೂರು ಇದ್ದೇ ಇದೆ. ಈ ಸೀಸನ್‌ನಲ್ಲಿ ಅಶ್ವಿನ್ ಗಳಿಸಿರುವ 43 ಟೆಸ್ಟ್ ವಿಕೆಟ್‌ಗಳು ಬಹುತೇಕ ಸ್ವದೇಶದಲ್ಲೇ ಸಿಕ್ಕಿವೆ. ಆದರೆ ಅದರ ಜತೆಗೆ ಬ್ಯಾಟಿಂಗ್‌ನಲ್ಲೂ ಮಿಂಚಿ 263 ರನ್ ಗಳಿಸಿರುವುದು ಅಶ್ವಿನ್‌ಗೆ ಪ್ರಶಸ್ತಿ ಬರಲು ಮುಖ್ಯ ಕಾರಣ. ಅಶ್ವಿನ್ ಬೌಲಿಂಗ್ ಬಲಪಡಿಸಿಕೊಳ್ಳದಿದ್ದಲ್ಲಿ ಪಕ್ಕದಲ್ಲೇ ಕಾದು ಕುಳಿತಿರುವ ರವೀಂದ್ರ ಜಡೇಜಾ ಅಥವಾ ಪ್ರಜ್ಞಾನ್ ಓಝಾ, ಅಶ್ವಿನ್ ಸ್ಥಾನವನ್ನು ಕಬಳಿಸುವ ಸಾಧ್ಯತೆ ಇದೆ. ಆಲ್‌ರೌಂಡರ್ ಜಡೇಜಾ ಬ್ಯಾಟಿಂಗ್ ಮತ್ತು ಫೀಲ್ಡಿಂಗ್‌ನಲ್ಲೂ ಮಿಂಚುತ್ತಿರುವುದು ಅಶ್ವಿನ್‌ಗೆ ಭಯ ಹುಟ್ಟಿಸುವ ವಿಚಾರವೇ.



## ಮುಖೇಶ್ ನಾಗಾಲೋಟ

ರಿಲಯನ್ಸ್ ಇಂಡಸ್ಟ್ರೀಸ್‌ನ ಚೇರ್‌ಮನ್ ಮತ್ತು ಎಂ.ಡಿ ಮುಖೇಶ್ ಅಂಬಾನಿ ಭಾರತದಲ್ಲೇ ಅತ್ಯಂತ ದೊಡ್ಡ ಶ್ರೀಮಂತ ಎನ್ನುವುದು ಕಳೆದ ಆರು ವರ್ಷಗಳಿಂದಲೂ ಎಲ್ಲರಿಗೂ ಗೊತ್ತಿರುವ ಸತ್ಯ. ಮುಂಬೈಯಲ್ಲಿ ಶತಕೋಟಿ ಡಾಲರ್ ಮೌಲ್ಯವುಳ್ಳ, 600 ಕೋಣೆಗಳ, 27 ಮಹಡಿಗಳ ದೊಡ್ಡ ಮನೆಯೊಂದನ್ನು ಅವರು ನಿರ್ಮಿಸಿದ್ದೂ, ಅದರ ತಿಂಗಳ ವಿದ್ಯುತ್ ಬಿಲ್ 71 ಲಕ್ಷ ರೂಪಾಯಿ ಬರುವುದೂ ಹಳೆಯ ಸುದ್ದಿ. ಹೊಸ ಸುದ್ದಿ ಏನೆಂದರೆ ಮುಂದಿನ ವರ್ಷ (2014ರಲ್ಲಿ) ಅವರು ಜಗತ್ತಿನಲ್ಲೇ ನಂಬರ್ ಒನ್ ಶ್ರೀಮಂತರಾಗುತ್ತಾರೆಯೆ.. ಎನ್ನುವುದು.

2013ರಲ್ಲಿ ಫೋರ್ಬ್ಸ್ ಪತ್ರಿಕೆ ಪ್ರಕಟಿಸಿರುವ ವಿಶ್ವ ಶ್ರೀಮಂತರ ಪಟ್ಟಿಯ ಪ್ರಕಾರ, ಮುಖೇಶ್ ಅಂಬಾನಿ ವಿಶ್ವದಲ್ಲೇ 22ನೇ ಅತಿದೊಡ್ಡ ಶ್ರೀಮಂತ. ಅವರ ಆಸ್ತಿಯ ಒಟ್ಟು ಮೊತ್ತ 29 ಶತಕೋಟಿ ಡಾಲರ್. ಆದರೆ ವರ್ಷದ ಕೊನೆಯ ಲೆಕ್ಕಾಚಾರದ ಪ್ರಕಾರ ಮುಖೇಶ್ ಈ ಪಟ್ಟಿಯ ಮುಂಚೂಣಿಗೆ ಬರಲು ದಾಪುಗಾಲು ಇಟ್ಟಿದ್ದಾರಂತೆ. ಕಾರ್ಲೋಸ್ ಸ್ಲಿಮ್, ಬಿಲ್ ಗೇಟ್ಸ್ ಮತ್ತು ವಾರೆನ್ ಬಫೆಟ್ ಈಗ ವಿಶ್ವ ಶ್ರೀಮಂತರ ಪಟ್ಟಿಯಲ್ಲಿ ಮೊದಲ ಮೂರು ಸ್ಥಾನದಲ್ಲಿದ್ದಾರೆ. ಬಲ್ಲ ಮೂಲಗಳ ಪ್ರಕಾರ, ಮುಖೇಶ್ ನಾಲ್ಕನೇ ಸ್ಥಾನದಲ್ಲಿದ್ದಾರೆ. ಇನ್ನು 6 ತಿಂಗಳು ಕಳೆದರೆ, ಮುಖೇಶ್ ಕಾರ್ಲೋಸ್ ಸ್ಲಿಮ್ ರನ್ನೂ ಹಿಂದಿಕ್ಕಿ ಮೊದಲ ಸ್ಥಾನಕ್ಕೆ ಬರುವುದು ನಿಶ್ಚಿತ ಎನ್ನುವುದು ಲೆಕ್ಕ ಬಲ್ಲವರ ಮಾತು. ಈಗಾಗಲೆ 4ಜಿ ತಂತ್ರಜ್ಞಾನದ ವಹಿವಾಟಿಗೆ ಕೈಹಾಕಿರುವ ಮುಖೇಶ್‌ರ, ಚಿಲ್ಲರೆ ಮಾರಾಟ ವಹಿವಾಟಿನಲ್ಲೂ ಶೇಕಡಾ 50ರಷ್ಟು ಏರಿಕೆಯಾಗಿದೆಯಂತೆ. ಇನ್ನೊಂದೆಡೆ ಕಾರ್ಲೋಸ್ ಸ್ಲಿಮ್ ಉದ್ಯಮದಲ್ಲಿ ಲಾಭ ಕಡಿಮೆ ಆಗುತ್ತಿದೆಯಂತೆ. 2014ರಲ್ಲಿ ಜಗತ್ತಿನ ಅತ್ಯಂತ ದೊಡ್ಡ ‘ನಂಬರ್ ಒನ್’ ಶ್ರೀಮಂತ ಭಾರತೀಯ ಎನ್ನುವುದು ಬಹುತೇಕ ಭಾರತೀಯರಿಗೆ ರೋಮಾಂಚನ ಹುಟ್ಟಿಸುವ ಸಂಗತಿಯಂತೂ ಹೌದು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65